ನೀವೆಲ್ಲಾ ನಿಜವಾದ ಕಲಾವಿದರೇ ಸೈ' ಎಂದು ತನ್ನನ್ನೂ ಅವನ ಜೊತೆಗೇ ಸೇರಿಸಿ, 'ನೀವೆಲ್ಲಾ ಕಲಾವಿದರು' ಎಂದು ವಿಶೇಷವಾಗಿ ಒತ್ತಿಹೇಳಿ ವ್ಯಂಗ್ಯವಾಡಿದ್ದು ನಾರಾಯಣನಿಗೆ ಅಸಹನೀಯವೆನ್ನಿಸಿತು.

ಯಕ್ಷಗಾನದ ಮರ್ಯಾದೆ ತೆಗೆಯುತ್ತಾನೆ ಇವ ಎಂದು ಕೆಂಡಾಮಂಡಲನಾಗಿ, ಗಿರಿಧರನ ಮೇಲೊಂದು ಕಣ್ಣಿಟ್ಟಿದ್ದ ಚೆಂಡೆ ನಾರಾಯಣ. ಗಿರಿಧರ ಹೊತ್ತು ಗೊತ್ತು ಇಲ್ಲದೇ ಯಾವಾಗ ಬೇಕೋ ಆಗ ಕುಡೀತಾ ಇರ್ತಾನೆ ಎಂದು ಯಾರೋ ಹೇಳಿದ್ದನ್ನು ಗುಟ್ಟಾಗಿ ಕೇಳಿದ್ದ ನಾರಾಯಣ, ಅದನ್ನು ಸ್ವತಃ ಪರೀಕ್ಷಿಸಬೇಕು ಎಂದೇ ಆಟ ಶುರುವಾಗುವ ಮೊದಲು, ಆಟ ಮುಗಿದ ನಂತರ ಅವನನ್ನು ಸೂಕ್ಷ್ಮವಾಗಿ ಗಮನಿಸಿದ್ದ. ಹಿರಿಯನಾಗಿದ್ದರೂ ಮಾತಾಡಲು ಧೈರ್ಯ ಸಾಲದೇ ಸುಮ್ಮನಾಗಿದ್ದ.

ಗಿರಿಧರ ತನ್ನ ಕುಡಿತದ ಚಟವನ್ನು ಯಾರಿಗೂ ಕಾಣದಂತೆ ತಾನು ಮುಚ್ಚಿಟ್ಟುಕೊಂಡಿದ್ದೇನೆ ಎನ್ನುವ ಧೈರ್ಯದಲ್ಲಿದ್ದರೂ ಭಾಗವತಿಕೆ ಮಾಡುವಾಗ ಅವನ ಬಾಯಿ ತೊದಲಿ, ಪದ್ಯದ ಸಾಹಿತ್ಯವೇ ಗೋಜಲು ಗೋಜಲಾದಂತೆ ಜನಗಳಿಗೆ ಅರ್ಥವಾಗದ ಸ್ಥಿತಿ ಬಂತು. ರಾಗ ಮಾತ್ರ ವಿಚಿತ್ರವಾಗಿ ಕೇಳಿಸುತ್ತಿತ್ತು ಬಿಟ್ಟರೆ, ಯಾವ ಸನ್ನಿವೇಶ, ಏನು ಸಾಹಿತ್ಯ, ರಾಗದಲ್ಲಿ ಇಷ್ಟೊಂದು ನೀರಸವೇಕೆ ಎಂದು ಗೊತ್ತಾಗದೇ ಪ್ರೇಕ್ಷಕರೂ ಗೊಂದಲಕ್ಕೆ ಬಿದ್ದರು. ಹೊಸತಾಗಿ ಯಕ್ಷಗಾನ ಭಾಗವತಿಕೆ ಕೇಳುವವರು ಇದೇ ಯಕ್ಷಗಾನ ಪದ್ಯ, ಇದನ್ನು ಹೀಗೇ ಹಾಡುವುದು ಎಂದು ನಂಬತೊಡಗಿದರು. ಮೇಳದ ಕ್ಯಾಂಪುಗಳಿರುವಾಗ ಟಿಕೇಟು ಕೊಟ್ಟು ಆಟ ನೋಡಲು ಬರುವವರು, ಗಿರಿಧರನ ಪದ್ಯ ಕೇಳಿ, 'ಎಂತ ಕರ್ಮ ಹಾಡ್ತಾನೆ ಮಾರಾಯ ಇವ?' ಎಂದು ರೇಗಿದರು.

ಗಿರಿಧರನ ಒಳಗುಟ್ಟು ಗೊತ್ತಿದ್ದ ಊರಿನ ಕೆಲವು ದೊಡ್ಡ ಮನುಷ್ಯರು, 'ಭಾಗವತರೇ ಇವತ್ತೊಂದು ಹೈ ಪಿಚ್ಚ್ ಪದ್ಯ ಹಾಡಿ, ಪದ್ಯ ರೈಸಿದರೆ ನಿಮಗೊಂದು ಒಳ್ಳೆ ಫಾರೀನು ಅಥ್ವಾ ಗೋವಾ ಮಾಲು ಕೊಡುವ' ಎಂದು ಇವನ ಪ್ರತಿಭೆಯನ್ನು ಕುಡಿತದ ಆಸೆ ಹುಟ್ಟಿಸಿಯೇ ಹಾಳು ಮಾಡ್ಬೇಕು ಎಂದು ಪಣ ತೊಟ್ಟವರಂತೆ ಎಲ್ಲಾ ಆಟಕ್ಕೂ ಬರುತ್ತಿದ್ದರು. ಅವರಿಗೋಸ್ಕರ ಇವನು ಹೈ ಪಿಚ್ ಪದ್ಯ ಹಾಡುತ್ತಿದ್ದ, 'ಹೇಗಾಯ್ತು ನನ್ನ ಪದ್ಯ' ಎಂದು ರಂಗದಲ್ಲೇ ಕೂತು ಅಲ್ಲೆಲ್ಲೋ ಕೂತ ಅವರನ್ನು ನೋಡಿ ಸಣ್ಣಗೇ ನಗುತ್ತಿದ್ದ, ಅವರು ಕಣ್ಣಲ್ಲೇ 'ಅದ್ಭುತ ಅದ್ಭುತ' ಎನ್ನುತ್ತಿದ್ದರು. ಆಟ ಎಲ್ಲಾ ಮುಗಿದ ಮೇಲೆ, 'ತಗೊಳ್ಳಿ ಭಾಗವತರೇ ನಿಮ್ಗೆ ನಮ್ಮ ಕಾಣಿಕೆ' ಎಂದು ಅವರು ಗುಟ್ಟಾಗಿ ಬಾಟ್ಲಿ ಕೊಡುತ್ತಿದ್ದರು. ಹೀಗೆ ಗಿರಿಧರನಿಗೆ ಬಾಟ್ಲಿ ಕೊಟ್ಟವರೇ, 'ಆ ಭಾಗವತ ಬರೀ ಕುಡುಕ, ಎಂತ ಮಾಲ್ ಕೊಟ್ರೂ ಕುಡಿತಾನೆ. ಅದ್ರ ಪವರ್‌ನಲ್ಲೇ ಹಾಡ್ತಾನೆ. ಅವ್ನ ಹೆಸರು ಬರೀ ಗಿರಿಧರ ಚಂದ ಕಾಣೂದಿಲ್ಲ. ಬಾಟ್ಲಿ ಗಿರಿಧರ ಇಟ್ರೆ ಬೆಸ್ಟ್... ಹೇಗೆ' ಎಂದು ಹೊಸ ನಾಮಕರಣ ಮಾಡಿಯೇಬಿಟ್ಟರು.

'ಭಾಗವತ್ರಿಗೆ ಬಾಟ್ಲಿಯೇ ಬೇಕಂತೆ, ಕುಡಿಯದೇ ಹಾಡುದೇ ಇಲ್ಲಂತೆ, ಮನೇಲಿ ಕುಡಿದ್ರೆ ತೊಂದ್ರೆ ಇಲ್ಲ, ರಂಗದಲ್ಲಿ ಕುಡಿಯೂದಾ ಹಾಳಾದವನು, ನಂಗೆ ಮೊದ್ಲೇ ಗೊತ್ತಿತ್ತು ಕುಡಿಯದೇ ಇಂತ ರಾಗ ಬರ್ಲಿಕ್ಕೆ ಸಾಧ್ಯವೇ ಇಲ್ಲಂತ, ಅಲ್ಲ ಮಾರ್ರೆ ಆ ನಮುನೆ ಕುಡಿಯುದಾ? ಇಂತ ಕುಡುಕನ ಪದ್ಯ ಕೇಳ್ಲಿಕ್ಕೆ ನಾವೆಂತ ಟಿಕೇಟ್ ಕೊಟ್ಟು ಆಟ ನೋಡ್ಬೇಕಾ...' ಹೀಗೆ ಜನ ಒಂದಕ್ಕೊಂದು ಸೇರಿಸಿ ಊರಲ್ಲಿ ಗಿರಿಧರ ಭಾಗವತರು ಎಂದು ಗೌರವಪೂರ್ವಕವಾಗಿ ಕರೆಯುವುದೇ ನಿಂತು ಹೋಗಿ, 'ಹೋ ಬಾಟ್ಲಿ ಗಿರಿಧರನಾ? ಆ ಬಾಟ್ಲಿ ಭಾಗವತನಾ?' ಅಂತೆಲ್ಲಾ ಜನರ ಮಾತು ಶುರುವಾಗುತ್ತಿತ್ತು. ಇದು ಕ್ರಮೇಣ ದುರ್ಗಾಭಗವತಿ ಮೇಳದ ಹೆಸರನ್ನೂ ಪ್ರತಿಷ್ಠೆಯನ್ನು ಹಾಳುಮಾಡುತ್ತಿತ್ತು. ಆ ಮೇಳದಲ್ಲಿ ಕೆಲಸ ಮಾಡುವ ಇತರ ಕಲಾವಿದರು ಇದರಿಂದ ಒಂದಷ್ಟು ಮುಜುಗರ ಅನುಭವಿಸಿಯೇ ಅನುಭವಿಸಿದರು. ಚೆಂಡೆ ನಾರಾಯಣನಂತೂ ಗಿರಿಧರನ ಬಗ್ಗೆ ಒಂದಷ್ಟು ಉಪ್ಪು ಖಾರ ಮಸಾಲೆ ಎಲ್ಲಾ ಸೇರಿಸಿ ಮೇಳದ ಯಜಮಾನರ ಬಳಿ ಗಿರಿಧರ ಮಹಾತ್ಮೆ ಪ್ರಸಂಗವನ್ನೇ ಮಾಡಿ ಕೊರೆದ.

ಮೇಳದ ಯಜಮಾನರಾದ ಶಿವಾನಂದ ನಾಯ್ಕರು ಕೆರಳಿಬಿಟ್ಟರು. 'ಏಯ್ ಗಿರಿಧರ ನಿನ್ನಿಂದ ನಮ್ಮ ಮೇಳದ ಹೆಸ್ರು ಹಾಳಾಗ್ತಿದೆ. ಆಟ ನೋಡಿದವ್ರೂ ಪದ್ಯ ಲಾಯಕ್ಕಿಲ್ಲ ಅಂತ ಉಗಿತಿದ್ದಾರೆ. ನಿನ್ ಚಟಕ್ಕೆ ನಾವು ಚಟ್ಟದಲ್ಲಿ ಕೂತ್ಕೊಳ್ಳೊ ಸ್ಥಿತಿ ಬರ್ತದೇನೋ, ನಮ್ಗೆ ಇದು ವರ್ಕ್‌ಔಟ್ ಆಗುದಿಲ್ಲ. ನಂಗೆ ಮೇಳದ ಪ್ರತಿಷ್ಠೆ ಮುಖ್ಯ. ಯಾರೂ ಮೇಳಕ್ಕೆ ಅನಿವಾರ್ಯ ಅಲ್ಲ. ಮುವ್ವತ್ತು ವರ್ಷಗಳಿಂದಲೂ ನಮ್ ಮೇಳ ಇದೆ, ಮುಂದೆಯೂ